ಮಾಡಬೇಕೆಂದು ತಮ್ಮ ಮೂಲಕ ನಾನು ಅವರಿಗೆ ಒತ್ತಾಯವನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು :- ಥ್ಯಾಂಕ್ಯೂ.

ಶ್ರೀ ಜೆ. ಚಂದ್ರಕಾಂತ್ ಬೆಲ್ಲದ್ :- ಅದಕ್ಕೆ ಉತ್ತರವನ್ನು ಕೊಡಬೇಕು ಸರ್

ಅಧ್ಯಕ್ಷರು : ಅವರು ಉತ್ತರವನ್ನು ಹೇಳಿದ್ದಾರಲ್ಲಾ. ತಮ್ಮ ಇತಿಮಿತಿಯೊಳಗಿನ ಎಲ್ಲಾ ಪ್ರಯತ್ನವನ್ನು ಮಾಡಿ ಈ ಕೆಲಸ ಒಳ್ಳೆಯದೆಂದು ಹೇಳಿದ್ದಾರೆ ಅದನ್ನು ನಾವು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜೆ. ಚಂದ್ರಕಾಂತ್ ಬೆಲ್ಲದ್ :- ಸ್ಮರಣ ಸಂಚಿಕೆಯನ್ನು ಪ್ರಿಂಟ್ ಮಾಡಿಸಿ ನಾವು ಕಳೆದ 4ವರ್ಷಗಳಿಂದ ಕಾಯುತ್ತಿದ್ದೇವೆ ಸರ್.

ಅಧ್ಯಕ್ಷರು :- ಮಾನ್ಯ ಗೋವಿಂದೇಗೌಡರೇ, ನೀವು ಮಾನ್ಯ ಸದಸ್ಯರ ಪಕ್ಕಕ್ಕೆ ಒಂದು ನಿಮಿಷ ಹೋಗಿ ಹೇಳಿಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ :- ಇದೇ ಸಾಲಿನಲ್ಲಿ ಆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆಂದು ಹೇಳಿದರೆ ಆಯಿತಲ್ಲಾ.

ಅಧ್ಯಕ್ಷರು :- ಮಾನ್ಯ ಸಗೀರ್‌ವರು ಬಹಳ ದೊಡ್ಡ ಆರ್ಜಂಟ್‌ನಲ್ಲಿದ್ದಾರೆ. ನಾಳೇನೇ ಅವರು ಬಿ.ಫಾರ್ಮ್ ತೆಗೆದುಕೊಂಡು ಚುನಾವಣೆಗೆ ಹೊರಡುವುದರಲ್ಲಿದ್ದಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಮಾನ್ಯ ಬೆಲ್ಲದ್‌ರವರ ಅಧ್ಯಕ್ಷತೆಯಲ್ಲಿ ಆ ಊರಿನಲ್ಲಿ ಒಂದು ಕಮಿಟಿಯನ್ನು ಮಾಡಲಿ. ಅವರು ಬಹಳ ಜನಪ್ರಿಯರಾಗಿದ್ದಾರೆ. ಅವರಿಗೆ ಜನರ ವಿಶ್ವಾಸ ಇದೆ. ನಿಮ್ಮ ನೋವು ನನಗೆ ಅರ್ಥವಾಗಿದೆ. ಎಷ್ಟು ಕಲೆಕ್ಷನ್ ಮಾಡುವುದಕ್ಕೆ ಸಾಧ್ಯವಿದೆ ಅಷ್ಟು ಕಲೆಕ್ಷನ್ ಮಾಡಿ. ಸರ್ಕಾರದಿಂದ ಏನು ನೆರವು ಕೊಡಬೇಕು ಅದನ್ನು ಕೊಡುತ್ತೇನೆ. ನಾನು ನೇರವಾಗಿ ವಿಷಯಕ್ಕೆ ಬಂದಿರುತ್ತೇನೆ.

ಅಧ್ಯಕ್ಷರು :- ನಮ್ಮ ಸದಸ್ಯರು ಒಂದು ಅಧಿವೇಶನ ಕಳೆದು ಇನ್ನೊಂದು ಅಧಿವೇಶನ ಬರುವುದರೊಳಗೆ ಪ್ರೊಸೀಜರ್ ಮರೆತಿರುತ್ತಾರೆ.

ಹುಬ್ಬಳ್ಳಿ ಮಹಾನಗರದಲ್ಲಿರುವ ಕಿಮ್ಸ್ ಸಂಸ್ಥೆಯ ಅಭಿವೃದ್ಧಿ ಬಗ್ಗೆ ಯೋಜನೆಗಳು.

230(1509)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಎರಡು ವರ್ಷಗಳಲ್ಲಿ ಹುಬ್ಬಳ್ಳಿ ಮಹಾನಗರದಲ್ಲಿರುವ 'ಕಿಮ್ಸ್' ಸಂಸ್ಥೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು, ಆ ಪೈಕಿ ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿದೆ ಅವುಗಳಿಗಾಗಿ ಖರ್ಚು ಮಾಡಲಾದ ಹಣ ಎಷ್ಟು (ವಿವರ ಒದಗಿಸುವುದು)

ಆ) ಕಿಮ್ಸ್ ಸಂಸ್ಥೆಯ ಹೆಚ್ಚಿನ ಅಭಿವೃದ್ಧಿ ದೃಷ್ಟಿಯಿಂದ ಹೊಸ ಯೋಜನೆಗಳನ್ನೇನಾದರೂ ಸರ್ಕಾರ ಹಾಕಿಕೊಂಡಿದೆಯೇ (ಅವುಗಳ ವಿವರ ನೀಡುವುದು)

ಡಾ ।। ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಕಾಮಗಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ

ಆ) ಹೌದು (ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ)

ಅನುಬಂಧ - 1

ಕೆಲಸಗಳ ವಿವರ	ಖರ್ಚಾದ ಹಣ ರೂ. ಲಕ್ಷಗಳಲ್ಲಿ	ಷರಾ
1. ಕಿಮ್ಸ್, ಆವರಣದಲ್ಲಿ ಎಲೆಕ್ಟ್ರಿಕಲ್ ಲಾಂಡ್ರಿ ಕಟ್ಟಡ ನಿರ್ಮಾಣ ಕೆಲಸ	30.99	ಪೂರ್ಣಗೊಂಡಿದೆ
2. ಕಿಮ್ಸ್ ಆವರಣದಲ್ಲಿ ಕೇಂದ್ರ ಗ್ರಂಥಾಲಯ ಕಟ್ಟಡ ನಿರ್ಮಾಣ ಕೆಲಸ	20.96	ಪೂರ್ಣಗೊಂಡಿದೆ
3. ಕಿಮ್ಸ್ ಆವರಣದಲ್ಲಿ ಸ್ಪೀಚ್ ಅಂಡ್ ಹಿಯರಿಂಗ್ ಮತ್ತು ಫಿಸಿಯೋಥೆರಪಿ ಕಟ್ಟಡ ನಿರ್ಮಾಣ ಕೆಲಸ	38.70	ಪೂರ್ಣಗೊಂಡಿದೆ
4. ಕಿಮ್ಸ್ ಆವರಣದಲ್ಲಿ ಪಿ.ಜಿ. ಹಾಸ್ಟೆಲ್ ಕಟ್ಟಡ ನಿರ್ಮಾಣ ಕೆಲಸ	32.70	ಪೂರ್ಣಗೊಂಡಿದೆ
5. ಕಿಮ್ಸ್ ಆವರಣದಲ್ಲಿ 300 ಕೆವಿಎ ಟ್ರಾನ್ಸ್‌ಫಾರ್ಮರ್ ಕೂಡಿಸಿದ್ದು.	10.97	ಪೂರ್ಣಗೊಂಡಿದೆ
6. ಕಿಮ್ಸ್ ಆಸ್ಪತ್ರೆ 180ಕೆವಿಎ ಜನರೇಟರ್ ಕೂಡಿಸಿದ್ದು	9.50	ಪೂರ್ಣಗೊಂಡಿದೆ
7. ಕಿಮ್ಸ್ ಆವರಣದಲ್ಲಿ ಕೋಬಾಲ್ಟ್ ಥೆರಪಿ ಕಟ್ಟಡ ಕೆಲಸ	10.72	ಪೂರ್ಣಗೊಂಡಿದೆ
8. ಕಾಲೇಜ್ ಆಸ್ಪತ್ರೆ ಮತ್ತು ಹೊರರೋಗಿ ಕಟ್ಟಡಗಳಲ್ಲಿ ವಿವಿಧ ಡಿಪಾರ್ಟ್‌ಮೆಂಟ್‌ಗಳಲ್ಲಿ ವಿವಿಧ ಸುಧಾರಣೆ ಕೆಲಸಗಳು ನೀರು ಸರಬರಾಜು, ವಿದ್ಯುತ್ ಸುಧಾರಣೆ ಇತ್ಯಾದಿ ಕೆಲಸಗಳು.	80.00	ಪೂರ್ಣಗೊಂಡಿದೆ
9. ಕಿಮ್ಸ್ ಆವರಣದಲ್ಲಿ 50,000 ಗ್ಯಾಲನ್ ಸಾಮರ್ಥ್ಯದ ನೆಲಮಟ್ಟದ ಸಂಪು ಕೂಡಿಸುವುದು.	4.00	ಪ್ರಗತಿಯಲ್ಲಿದೆ.

ಅನುಬಂಧ - 2

ಕೆಲಸದ ಹೆಸರು	ಅಂದಾಜು ಮೊತ್ತ
1. ಕಿಮ್ಸ್ ಆಸ್ಪತ್ರೆ ಮತ್ತು ಓಪಿಡಿ ಕಟ್ಟಡಗಳ ಸಮಗ್ರ ಸುಧಾರಣೆ ಕೆಲಸಗಳು ಕರ್ನಾಟಕ ಹೆಲ್ತ್ ಸಿಸ್ಟಮ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್‌ರವರಿಂದ 297ಲಕ್ಷ ರೂ. ಗಳ ಕೆಲಸಗಳಿಗೆ ಟೆಂಡರ್ ಕರೆಯಲಾಗಿದೆ.	297.00ಲಕ್ಷಗಳು
2. 3ಮತ್ತು 4ನೇ ವರ್ಗದ ವಸತಿ ಗೃಹಗಳಿಗೆ ಒಳಚರಂಡಿ ವ್ಯವಸ್ಥೆಗಾಗಿ	22.50ಲಕ್ಷಗಳು
3. ಕಿಮ್ಸ್ ಕ್ಯಾಂಪಸ್‌ನಲ್ಲಿ ಐಸಿಯು ಮತ್ತು ಐ.ಸಿ.ಸಿ.ಯು ವ್ಯವಸ್ಥೆಗಾಗಿ	40.00ಲಕ್ಷಗಳು
4. ಕಿಮ್ಸ್ ಕ್ಯಾಂಪಸ್‌ನ ಮೆಡಿಕಲ್ ಕಾಲೇಜ್ ಮುಖ್ಯ ಕಟ್ಟಡವನ್ನು ಅಭಿವೃದ್ಧಿಪಡಿಸುವುದಕ್ಕಾಗಿ	48.00ಲಕ್ಷಗಳು
5. ಹುಬ್ಬಳ್ಳಿಯ ಕಿಮ್ಸ್ ಕ್ಯಾಂಪಸ್‌ನ ವಿವೇಕ್ ಪುರುಷರ ವಿದ್ಯಾರ್ಥಿ ನಿಲಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ	22.36ಲಕ್ಷಗಳು
6 ಹುಬ್ಬಳ್ಳಿಯ ಕಿಮ್ಸ್ ಕ್ಯಾಂಪಸ್‌ನ ಆನಂದ ಪುರುಷರ ವಿದ್ಯಾರ್ಥಿ ನಿಲಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ	18.50ಲಕ್ಷಗಳು
7. ಹುಬ್ಬಳ್ಳಿಯ ಕಿಮ್ಸ್ ಕ್ಯಾಂಪಸ್‌ನ ಚೇತನ ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ	12.60ಲಕ್ಷಗಳು
8. ಹುಬ್ಬಳ್ಳಿಯ ಕಿಮ್ಸ್ ಕ್ಯಾಂಪಸ್‌ನ ಅರ್ಚನಾ ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ	14.10ಲಕ್ಷಗಳು
9. ಹುಬ್ಬಳ್ಳಿಯ ಕಿಮ್ಸ್ ಕ್ಯಾಂಪಸ್‌ನ ದೀಪಾ ನರ್ಸಸ್ ಹಾಸ್ಟಲ್‌ನ್ನು ಅಭಿವೃದ್ಧಿಪಡಿಸುವುದಕ್ಕಾಗಿ	10.80ಲಕ್ಷಗಳು
10. ಹುಬ್ಬಳ್ಳಿಯ ಕಿಮ್ಸ್ ಕ್ಯಾಂಪಸ್‌ನ ವಿವೇಕ್, ಆನಂದ್ ಪುರುಷರ ವಿದ್ಯಾರ್ಥಿನಿಲಯ ಅರ್ಚನಾ, ಚೇತನ ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯ ದೀಪಾ ನರ್ಸಸ್ ಹಾಸ್ಟೆಲ್‌ಗಳಿಗೆ ಬಿಸಿನೀರಿನ ಸೌಲಭ್ಯವನ್ನು ಒದಗಿಸುವ ಬಗ್ಗೆ	7.50ಲಕ್ಷಗಳು
11. ಸಾರ್ವಜನಿಕರಿಗೆ ಬೇರೊಂದು ರಸ್ತೆ ಒದಗಿಸುವುದಕ್ಕಾಗಿ	2.00ಲಕ್ಷಗಳು

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಕೆಲವು ನಿಮಿಷದ ಹಿಂದೆ ಉತ್ತರವನ್ನು ಕೊಟ್ಟರು. ಇಲ್ಲಿಯವರೆಗೆ ಉತ್ತರ ಬಂದಿರಲಿಲ್ಲ. ಹುಬ್ಬಳ್ಳಿ ನಗರದಲ್ಲಿ ಇದು ಒಂದು ದೊಡ್ಡ ಆಸ್ಪತ್ರೆ. ಇಲ್ಲಿಯವರೆಗೆ ಆಗಿರುವ ಕಾಮಗಾರಿಗಳ ವಿವರಗಳನ್ನು ಹಾಗೂ ಮುಂದೆ ಆಗಬೇಕಾದ ಕಾಮಗಾರಿಗಳ ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಈ ಕಿಮ್ಸ್ ಸಂಸ್ಥೆಯನ್ನು ಅಟಾನಮಸ್ ಸಂಸ್ಥೆಯನ್ನಾಗಿ ಮಾಡಿದ ನಂತರ ಇವತ್ತಿನವರೆಗೆ ಅಲ್ಲಿ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿರುವುದಿಲ್ಲ. ಸಾಕಷ್ಟು ಡಾಕ್ಟರ್‌ಗಳ ಕೊರತೆ ಇದೆ. ಸಿಬ್ಬಂದಿವರ್ಗದ ಕೊರತೆ ಇದೆ. ಅದರ ಬಗ್ಗೆ ಸರ್ಕಾರ ಯಾವ ರೀತಿಯಾದ ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇವತ್ತು ಅಲ್ಲಿ ಪ್ರಾಮುಖ್ಯವಾಗಿ ನ್ಯೂರೋ ಸರ್ಜನ್ ಅಲ್ಲಿ ಇಲ್ಲ. ಅಲ್ಲಿ ಯಾವುದೇ ಒಂದು ಅಪಘಾತ ಆದ ಸಂದರ್ಭದಲ್ಲಿ ನಾವು ಬೆಳಗಾಂ ಮತ್ತು ಬೆಂಗಳೂರಿಗೆ ಆ ಪೇಷಂಟ್ ಕರೆದುಕೊಂಡು ಹೋಗುವಂಥ ಪರಿಸ್ಥಿತಿ ಇವತ್ತಿಗೂ ಇದೆ. ಹೀಗಾಗಿ ನ್ಯೂರೋ ಸರ್ಜನ್ ನೇಮಕ ಮಾಡುವುದು ಅವಶ್ಯಕ ಇದೆ. ಆಗಾಗ ಇಲ್ಲಿ ಔಷಧಿಗಳ ಕೊರತೆ ಆಗುತ್ತಿದೆ. ಸರಿಯಾದ ಔಷಧಿಗಳ ಪೂರೈಕೆ ಇಲ್ಲ. ಈಗಾಗಲೇ ಸರ್ಕಾರದವರು ವಿಶ್ವ ಬ್ಯಾಂಕಿನ ನೆರವಿನಿಂದ ರಾಜ್ಯದಲ್ಲಿರುವ ಹಲವಾರು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವಂಥದ್ದು ಮತ್ತು ಸುಧಾರಣೆ ಮಾಡುವಂಥ ಕೆಲಸವನ್ನು ತೆಗೆದುಕೊಂಡಿದ್ದಾರೆ. ಈ ಕಿಮ್ಸ್ ಆಸ್ಪತ್ರೆಯಲ್ಲಿ ಸುಧಾರಣೆ ಸಲುವಾಗಿ ಈ ವಿಶ್ವ ಬ್ಯಾಂಕಿನ ನೆರವಿನಿಂದ ಯಾವ ಸುಧಾರಣೆಗಳನ್ನು ಕೈಕೊಂಡಿದ್ದಾರೆ ಎಂಬುದನ್ನು ದಯಮಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ || ಎಂ. ಶಂಕರ್ ನಾಯಕ್ :- ಮಾನ್ಯ ಅಧ್ಯಕ್ಷರೆ, ಅವರು ಕೇಳಿರತಕ್ಕಂಥದ್ದು ಕಾಮಗಾರಿ ಕೆಲಸ. ಈಗ ಹೇಳುತ್ತಾರೆ ಸಿಬ್ಬಂದಿ, ಡಾಕ್ಟರ್, ಔಷಧಿ ಎಂದು ಅದರ ಬಗ್ಗೆ ಸೆಪರೇಟ್ ಪ್ರಶ್ನೆ ಕೇಳಲಿ ಅದರ ಬಗ್ಗೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಅಧ್ಯಕ್ಷರೆ, ನಾನು ಇಲ್ಲಿ ಕೆಲವು ಕಾಮಗಾರಿಗಳ ಕೊರತೆ ಇದ್ದ ಬಗ್ಗೆ ಕೂಡ ಮಾತನಾಡಿದ್ದೇನೆ.

ಅಧ್ಯಕ್ಷರು :- ಮಂತ್ರಿಗಳು ಅವರ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ನಿಮ್ಮ ಪ್ರಶ್ನೆಗಳನ್ನು ನೋಡಿ ಅದಕ್ಕೆ ಬೇಕಾಗಿರತಕ್ಕಂಥ ಉತ್ತರವನ್ನು ತಂದಿರುತ್ತಾರೆ. ನೀವು ಪ್ರಪಂಚದಲ್ಲಿರತಕ್ಕಂಥದ್ದನ್ನು ಕೇಳಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ :- ಎರಡನೇ ಪ್ರಶ್ನೆಯನ್ನು ತಾವು ದಯವಿಟ್ಟು ನೋಡಬೇಕು ಸರ್. ಕಿಮ್ಸ್ ಸಂಸ್ಥೆಯ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಇನ್ನು ಹೆಚ್ಚಿನ ಸುಧಾರಣೆ ಸಲುವಾಗಿ ಏನು ಮಾಡುತ್ತಾರೆನ್ನುವುದನ್ನು ಅವರು ಹೇಳಬಹುದಾಗಿತ್ತು.

ಅಧ್ಯಕ್ಷರು :- ನಾನು ಓದಿದ್ದೇನೆ. ನಾನು ಹೇಳುವುದನ್ನು ದಯಮಾಡಿ ಕೇಳಿ. ದಯಮಾಡಿ ತಾವು ಇವತ್ತು ಸ್ವಲ್ಪ ಸಮಯವನ್ನು ತೆಗೆದುಕೊಳ್ಳಿ. ತಡೆಯಾದರೂ ಚಿಂತೆ ಇಲ್ಲ. ಚುಕ್ಕೆ ಗುರುತಿನ ಪ್ರಶ್ನೆ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಏನು ವ್ಯತ್ಯಾಸ ಇದೆ. ಪ್ರಶ್ನೋತ್ತರ ವೇಳೆಯ ಪ್ರಾಮುಖ್ಯತೆ ಏನು ? ಹೇಗೆ ಏನು ಎಂದು ತಿಳಿದುಕೊಳ್ಳಿ. ಏನು ದುರಾದೃಷ್ಟವೋ ಏನೋ ಇಷ್ಟು ದಿವಸವಾದರೂ ನಮ್ಮ ಸದಸ್ಯರು...

ಶ್ರೀ ಎಂ.ಪಿ. ಪ್ರಕಾಶ್ :- ರಿವ್ಯೂ ಮಾಡಿದಂಥ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂತು. ಅಲ್ಲಿ ಕಿಮ್ಸ್ ಡೈರೆಕ್ಟರು ಇದ್ದರು. ಈ ಶಾಸಕರೂ ಕೂಡ ಆ ಸಂದರ್ಭದಲ್ಲಿ ಇದ್ದರು. ಆ ಸಮಯದಲ್ಲಿ ಅವರು ಹೇಳಿದರು ಇಂತಹ ಒಂದು ನೋಟಿಫಿಕೇಷನ್ ಮಾಡಿದರು ಕೂಡ ಡಾಕ್ಟರ್‌ಗಳು ಬರುತ್ತಿಲ್ಲ. ಎರಡು-ಮೂರು ಸಲ ಈ ಬಗ್ಗೆ ಪ್ರಯತ್ನ ಮಾಡಿದರೂ ಕೂಡ ಸಾಧ್ಯವಾಗಿಲ್ಲ. ಆದರೂ ಮುಂದಿನ ಕ್ರಮ ಕೈಗೊಳ್ಳುತ್ತೇನೆ ಎನ್ನುವ ಮಾತನ್ನೂ ಕೂಡ ಅವರು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ :- ಹೊಸ ಯೋಜನೆ ಎಂದು ಸ್ಪೆಸಿಫಿಕ್ಕಾಗಿ ಇದೆ ಸರ್. ಅದರ ಬಗ್ಗೆ ಉತ್ತರ ಕೊಡುತ್ತಿಲ್ಲವೆಂದರೆ ಏನು ಮಾಡುವುದು ? ಹೊಸಯೋಜನೆಗಳು ಏನು ಇವೆ ಎಂದು ಕೇಳಿದರೂ ಕೂಡ ಅದಕ್ಕೆ ಉತ್ತರವನ್ನು ಕೊಟ್ಟಿಲ್ಲ.

Dr. M. SHANKAR NAIAK :- He is one of the Members in the Board of Visitors. The Board meets very regularly

ಅವರು ಸ್ಪೆಸಿಫಿಕ್ಕಾಗಿ ಕಾಮಗಾರಿ ಕೆಲಸದ ಬಗ್ಗೆ ಕೇಳಿದ್ದಾರೆ. ನಾನು ಅದಕ್ಕೆ ಸ್ಪೆಸಿಫಿಕ್ಕಾಗಿ ಉತ್ತರವನ್ನು ಕೊಟ್ಟಿದ್ದೇನೆ. ಯಾವ ಕಾಮಗಾರಿ ಕೆಲಸ ಪೂರ್ಣ ಗೊಂಡಿದೆ. ತಾವು ಅದನ್ನು ಬಿಟ್ಟು ಬೇರೆ ಕೇಳಿದರೆ ಅದಕ್ಕೆ ನಾನು ಹೇಳಿದ್ದೇನೆ, ಬೇರೆ ಪ್ರಶ್ನೆಯನ್ನು ಕೇಳಿದರೆ ಅದರ ಬಗ್ಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಎರಡನೇ ಪ್ರಶ್ನೆ ಕ್ಲಿಯರ್ ಇದೆ. ಕಿಮ್ಸ್ ಸಂಸ್ಥೆಯ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ ಹಾಕಿಕೊಂಡಿರುವ ಆ ಹೊಸ ಯೋಜನೆಗಳಲ್ಲಿ ಏನು ಬರುತ್ತವೆ. ಆ ಕಾಮಗಾರಿಗೆ ಅಷ್ಟೇ ನೀವು ಇಂಟರ್‌ಪ್ರಿಟೇಷನ್ ಮಾಡುತ್ತೀರಾ ?

ಡಾ ॥ ಎಂ. ಶಂಕರ್‌ನಾಯ್ಕ್ :- ಕಳೆದ ಎರಡು ವರ್ಷಗಳಲ್ಲಿ ಹುಬ್ಬಳ್ಳಿ ಮಹಾನಗರ ಪಾಲಿಕೆಯಲ್ಲಿರುವ ಕಿಮ್ಸ್ ಸಂಸ್ಥೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು, ಆ ಪೈಕಿ ಯಾವ ಯಾವ ಕಾಮಗಾರಿಯು ಪೂರ್ಣಗೊಂಡಿದೆ, ಅವುಗಳಿಗೆ ಖರ್ಚು ಮಾಡಿದ ಹಣ ಎಷ್ಟು ಎಂಬ ಬಗ್ಗೆ ಉತ್ತರವನ್ನು ಕೊಟ್ಟಿದೆ. ಕಿಮ್ಸ್ ಆಸ್ಪತ್ರೆಯ ಹೆಚ್ಚಿನ ಅಭಿವೃದ್ಧಿ ದೃಷ್ಟಿಯಿಂದ ಹೊಸ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆಯೇ ಎಂಬುದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ನಾವು ಅನೇಕ ಸಂದರ್ಭಗಳಲ್ಲಿ ಮೆಡಿಕಲ್ ಕಾಲೇಜಿನಲ್ಲಿರತಕ್ಕಂಥ ಅಧ್ಯಾಪಕರ ಕೊರತೆ ಬಗ್ಗೆ ಹೇಳಿದ್ದೇನೆ. ಈಗ ಕಿಮ್ಸ್ ಸಂಸ್ಥೆಯಲ್ಲಿ ಪ್ರಿ ಅಂಡ್ ಕ್ಲಿನಿಕಲ್ ಮಾತ್ರ ಇದೆ. ನಾವು ಅಲ್ಲಿ ರಿಪೀಟೆಡ್ ಜಾಹಿರಾತು ಕೊಟ್ಟರೂ ಯಾರೂ ಜನ ಸಿಗುತ್ತಿಲ್ಲ.

12-20 ಪಿ. ಎಂ

Because in the whole of the country. there is no man power for pre- and para medical subjects .

ಈ ಕ್ಲಿನಿಕಲ್ ಸಬ್ಜೆಕ್ಟ್‌ನಲ್ಲಿ ನಮ್ಮ ಹತ್ತಿರ ಎಷ್ಟು ಸ್ಯಾಂಕ್ಷನ್ ಪೋಸ್ಟ್ ಇದೆಯೋ ಅಷ್ಟು ಹುದ್ದೆಗಳನ್ನು ನಾವು ತುಂಬಿದ್ದೇವೆ. ತಾವು ನ್ಯೂರೋ ಸರ್ಜನ್ ಹುದ್ದೆಯ ಬಗ್ಗೆ ಕೇಳಿದ್ದೀರಿ. ಅಲ್ಲಿ ನ್ಯೂರೋ ಸರ್ಜನ್ ಪೋಸ್ಟ್ ಇಲ್ಲ. ಆ ಹುದ್ದೆಯನ್ನು ಸ್ಯಾಂಕ್ಷನ್ ಮಾಡಿಸಿ ಮುಂದಿನ ವ್ಯವಸ್ಥೆಯನ್ನು ನಾವು ಮಾಡಬೇಕಾಗುತ್ತದೆ. ಈ ಬಗ್ಗೆ ನಾನು ಎಲ್ಲಾ ವಿವರಗಳನ್ನು ತರಿಸಿ ಸರಿಯಾದಂತಹ ಉತ್ತರವನ್ನು ಕೋಡಬೇಕಾಗುತ್ತದೆ. ಈಗ ತಾವು ಏನು ಪ್ರಶ್ನೆಯನ್ನು ಕೇಳಿದ್ದೀರಿ ಅದಕ್ಕೆ ನಾನು ಉತ್ತರವನ್ನು ಒದಗಿಸಿದ್ದೇನೆ.

ಶ್ರೀ ಕೆ. ವಿರೂಪಾಕ್ಷಪ್ಪ :- ಸನ್ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ವರ್ಷಗಳಿಂದ ಕೆಎಂಸಿಯವರು ನ್ಯೂರೋ ಸರ್ಜನ್ ಬೇಕೆಂದು ಕೇಳಿದರು. ನಾನು ಇದರ ಬಗ್ಗೆ 8-10ಸಲ ಕೇಳಿದ್ದೇನೆ. ಅಲ್ಲಿ ರಾಷ್ಟ್ರೀಯ ಹೆದ್ದಾರಿ ಇದ್ದು ಆಕ್ಸಿಡೆಂಟ್‌ಗಳು ಬಹಳ ಆಗುವುದರಿಂದ, ಅಲ್ಲಿ ಹೆಚ್ಚಿನ ಜನರು ಸಾಯುತ್ತಿದ್ದಾರೆ. ಅದಕ್ಕೋಸ್ಕರ ನ್ಯೂರೋ ಸರ್ಜನ್ ಬೇಕು ಎಂದು ಹತ್ತು ಸಲ ಕೇಳಿದ್ದೇನೆ. ಮತ್ತೇ ನಾವೇನಾದರೂ ಉತ್ತರ ಕರ್ನಾಟಕ ಬಗ್ಗೆ ಮಾತನಾಡಿದರೆ ಅದಕ್ಕೆ ತಾವು ಅಡ್ಡ ಬರುತ್ತೀರಿ. ಇಲ್ಲಿ ಒಂದೇ ಒಂದು ದವಾಖಾನೆ ಇರುತ್ತದೆ.

ಅಧ್ಯಕ್ಷರು :- ನನಗೆ ಈಗ ಕನ್‌ವಿನ್ಸ್ ಆಗಿದೆ. ನಿಮ್ಮ ಭಾಗಕ್ಕೆ ನ್ಯೂರೋ ಸರ್ಜನ್ ವ್ಯವಸ್ಥೆಯನ್ನು ಮಾಡಿಸುತ್ತೇನೆ. ಈ ಬಗ್ಗೆ ನಾನೂ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇನೆ.

ರಾಜ್ಯದಲ್ಲಿ 98-99ನೇ ಸಾಲಿನಲ್ಲಿ ಹೊಸ ಪ್ರೌಢಶಾಲೆಗಳನ್ನು ತೆರೆಯುವುದು.

231 (1580)

ಶ್ರೀ ಉಜ್ಜೆನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿ 98-99ನೇ ಸಾಲಿನಲ್ಲಿ ಹೊಸ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಆ) ಹಾಗಿದ್ದಲ್ಲಿ ತೆರೆಯಲು ಉದ್ದೇಶಿಸಿರುವ ಶಾಲೆಗಳ ಸಂಖ್ಯೆ ಎಷ್ಟು ?

ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1998-99ನೇ ಸಾಲಿನಲ್ಲಿ ಒಟ್ಟು 217 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಬಿ. ಬಣಕಾರ್ :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 1999-2000ನೇ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಕಳೆದ ಸಾಲಿನಲ್ಲಿ 717ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ ಬಹಳಷ್ಟು ಇದೆ. ಆದರೆ ಈ ಸಾಲಿನಲ್ಲಿ ಸರ್ಕಾರ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯಲಿಕ್ಕೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ಸಚಿವರಿಂದ ತಿಳಿಯ ಬಯಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರು 1998-99ನೇ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ ಎಂದು ಕೇಳಿದ್ದಾರೆ. ಇದು ತಪ್ಪಾಗಿದೆ. ಅವರು 1999-2000ನೇ ಸಾಲಿನಲ್ಲಿ ಎಂದು ಹೇಳಬೇಕಾಗಿತ್ತು. 1998-99ನೇ ಸಾಲಿನಲ್ಲಿ ಎಷ್ಟು ಶಾಲೆಗಳನ್ನು ತೆರೆದಿದ್ದೇವೆ ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಆದರೆ 1999-2000ನೇ ಸಾಲಿನಲ್ಲಿ ಹೊಸದಾಗಿ ಹೈಸ್ಕೂಲ್‌ಗಳನ್ನು ತೆರೆಯುವ ಸಾಧ್ಯತೆ ಇಲ್ಲ. ಅದಕ್ಕಾಗಿ ತಾವು ಬೇಜಾರು ಮಾಡಿಕೊಳ್ಳಬೇಡಿ. ಇದುವರೆಗೂ ನಾವು ತೀರ್ಮಾನ ಮಾಡಿರುವುದರಲ್ಲಿ ಹೊಸದಾಗಿ ಹೈಸ್ಕೂಲ್‌ಗಳನ್ನು ಕೊಡುವುದಕ್ಕೆ ಅವಕಾಶವಿಲ್ಲ.